ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಸಚಿವರು) :– ಸನ್ಮಾನ್ಯ ಛೇರ್ಮನ್‌ರವರೆ, ಟಾಸ್ಕ್‌ಫೋರ್ಸ್‌ಗೆ ಹಣ ಬಿಡುಗಡೆ ಮಾಡಬೇಕೆನ್ನುವ ಬೇಡಿಕೆ ಏನಿದೆ ಇದರ ಬಗ್ಗೆ ಕುಡಿಯುವ ನೀರಿನ ಪೂರೈಕೆ ಸಚಿವರ ಗಮನಕ್ಕೆ ತಂದು ಹಣ ಬಿಡುಗಡೆ ಮಾಡಿಸುವಂಥ ವ್ಯವಸ್ಥೆಯನ್ನು ಅತಿ ಶೀಘ್ರದಲ್ಲಿಯೇ ಮಾಡಿಸುತ್ತೇನೆ ಎಂದು ಹೇಳಬಯಸುತ್ತೇನೆ. ಇನ್ನು ಮಾನ್ಯ ಐವಾನ್ ನಿಗ್ಲಿಯವರು ನಗರ ಪ್ರದೇಶಕ್ಕೆ ಸೀಮಿತವಾಗಿರತಕ್ಕಂಥ ಉಪ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಹಣ ಬಿಡುಗಡೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ :– ಟಾಸ್ಕ್‌ಫೋರ್ಸ್‌ಗೆ ತಕ್ಷಣ ಹಣ ಬಿಡುಗಡೆ ಮಾಡಿಸುತ್ತೇನೆಂದು ನೀವು ಹೇಳಬೇಕು. ಬೇಸಿಗೆ ಕಾಲ ಮುಗಿದುಹೋದ ಮೇಲೆ ನೀವು ಹಣ ಬಿಡುಗಡೆ ಮಾಡಿದರೆ ಉಪಯೋಗ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ.ಎಂ. ಉದಾಸಿ :– ಹಣ ಬಿಡುಗಡೆ ಮಾಡಬೇಕು ಎಂದು ತಮ್ಮ ಬೇಡಿಕೆ ಏನಿದೆಯಲ್ಲ ಇದನ್ನು ಅತಿ ಶೀಘ್ರದಲ್ಲಿಯೇ ಆ ಹಣ ಬಿಡುಗಡೆ ಮಾಡಿಸುವಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಫ್ಲೋರೈಡ್ ರಹಿತ ಕುಡಿಯುವ ನೀರನ್ನು ಒದಗಿಸುವುದು.

369 (2278) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) :– ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಎಷ್ಟು ಹಳ್ಳಿಗಳ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಇರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಗಮನಿಸಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಈ ಸಮಸ್ಯೆಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೆ?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಬಾಗಲಕೋಟೆ ಜಿಲ್ಲೆಯ 135 ಗ್ರಾಮಗಳ ಕುಡಿಯುವ ನೀರಿನ ಜಲಮೂಲಗಳಲ್ಲಿ ಅಧಿಕ ಫ್ಲೋರೈಡ್ ಅಂಶವಿದೆ.

ಆ) ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಇರುವಂತಹ ಗ್ರಾಮಗಳನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡಿಕೊಂಡು ಭೂಮಿಯ ಮೇಲ್ಮೈ ಜಲಮೂಲ ಆಧಾರಿತ ಯೋಜನೆಗಳನ್ನು ಪರ್ಯಾಯವಾಗಿ ಶುದ್ಧ ಕುಡಿಯುವ ನೀರು ಪೂರೈಕೆ ಸಲುವಾಗಿ ರೂಪಿಸಲಾಗುತ್ತಿದೆ.

ಇ) ಹೌದು. ಈ ಸಲುವಾಗಿ ಈಗಾಗಲೇ 347 ಜನವಸತಿಗಳಿಗೆ ಅನುಕೂಲವಾಗುವಂತೆ ರೂ. 151.21 ಕೋಟಿ ಅಂದಾಜಿನ 32 ಯೋಜನೆಗಳಿಗೆ ರಾಜ್ಯ ಮಟ್ಟದ ಎಂಫವರ್ಡ್ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಈ ಪೈಕಿ ರೂ. 64.65 ಕೋಟಿ ಅಂದಾಜಿನ 17 ಪ್ರತ್ಯೇಕ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳನ್ನು ಆದ್ಯತೆ ಮೇಲೆ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ :- ಮಾನ್ಯ ಛೇರ್ಮನ್‌ರವರೆ, ಉತ್ತರದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ 135 ಗ್ರಾಮಗಳಲ್ಲಿ ಫ್ಲೋರೈಡ್ ಅಂಶವಿದೆಯೆಂದು ಹೇಳಿದ್ದಾರೆ. ಬಾಗಲಕೋಟೆ ಜಿಲ್ಲೆಯ ಶಾಸಕರುಗಳು ಇಲ್ಲಿ ಇದ್ದಾರೆ. ಬಹುತೇಕ ಒಂದೊಂದು ತಾಲ್ಲೂಕಿನಲ್ಲಿಯೂ ಕೂಡ ನೂರು ಹಳ್ಳಿಗಳಲ್ಲಿ ಫ್ಲೋರೈಡ್ ಅಂಶವಿರುತ್ತದೆ. ಇದುವರೆಗೂ ಕೂಡ ಇಲ್ಲಿ ಫ್ಲೋರೈಡ್ ರಹಿತ ಕುಡಿಯುವ ನೀರನ್ನು ಕೊಡುವ ವ್ಯವಸ್ಥೆಯನ್ನು ಮಾಡಿಲ್ಲ. ಕೇವಲ ಇವರು ಉತ್ತರದಲ್ಲಿ ಕುಡಿಯುವ ನೀರು ಪೂರೈಕೆ ಸಲುವಾಗಿ ಯೋಜನೆ ರೂಪಿಸಲಾಗಿದೆಯೆಂದು ಹೇಳುತ್ತಾರೆ. ಒಂದು ಕಡೆ ಇವರು ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳಲಾಗಿದೆಯೆಂದು ಹೇಳಿದ್ದಾರೆ. ಆದರೆ ಯಾವುದೇ ಒಂದು ಹಳ್ಳಿಯಲ್ಲಿಯೂ ಕೂಡ ಶುದ್ಧವಾದ ಕುಡಿಯುವ ನೀರನ್ನೂ ಇದುವರೆಗೂ ಕೊಟ್ಟಿಲ್ಲ. ಆದರೆ 14 ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ 5 ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮಕ್ಕೆ ಟೆಂಡರ್ ಆಗಿದೆ. ಆದರೆ ಆ ಕಾರ್ಯಕ್ರಮವನ್ನು ಇದುವರೆಗೂ ಪ್ರಾರಂಭ ಮಾಡುತ್ತಿಲ್ಲ. ಇನ್ನು ಇವರು ಉತ್ತರದಲ್ಲಿ 135 ಹಳ್ಳಿಗಳು ಎಂದು ಏನು ಹೇಳಿದ್ದಾರೆ ಅದು ಇನ್ನೂ ಹೆಚ್ಚು ಹಳ್ಳಿಗಳಿವೆ. ಆದಕಾರಣ ಸರಿಯಾದ ಉತ್ತರವನ್ನು ಕೊಡಬೇಕು. ಇನ್ನು ಎಷ್ಟು ದಿವಸಗಳಲ್ಲಿ ಫ್ಲೋರೈಡ್ ರಹಿತ ಶುದ್ಧ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುತ್ತದೆ ಎಂಬ ಬಗ್ಗೆ ಸ್ಪಷ್ಟ ಉತ್ತರವನ್ನು ಕೊಡಬೇಕು. ಕೇವಲ ಇಂಥ ಹಾರಿಕೆ ಉತ್ತರ ಕೊಡಬಾರದು. ಏಕೆಂದರೆ ಈ ಫ್ಲೋರೈಡ್ ನೀರನ್ನು ಕುಡಿದು ಅಲ್ಲಿಯ ಜನರ ಪರಿಸ್ಥಿತಿ ಹೇಗಾಗಿದೆಯೆಂದರೆ ಮೊಣಕಾಲು, ಮೊಣಕೈ ಹಿಡಿದುಕೊಂಡು ನೋವಿನಿಂದ ಎಲ್ಲೂ ಓಡಾಡುವುದಕ್ಕೆ ಆಗುತ್ತಿಲ್ಲ. ಇಂಥ ಪರಿಸ್ಥಿತಿ ಇದ್ದರೂ ಕೂಡ ಇವರು ಕೇವಲ ಹಾರಿಕೆ ಉತ್ತರ ಕೊಟ್ಟು ನೋಡುತ್ತೇವೆ, ಮಾಡುತ್ತೇವೆ ಎಂದರೆ ಯಾವ ರೀತಿಯ ಸರ್ಕಾರ ಸಾರ್? ಶುದ್ಧವಾದ ಕುಡಿಯುವ

ನೀರನ್ನು ಕೊಡದಿದ್ದರೆ ಮುಂದೆ ಜನರ ಗತಿಯೇನು ಹೇಳಿ? ಎಷ್ಟು ದಿವಸ ಬೋರ್‌ವೆಲ್ ನೀರನ್ನೇ ಕುಡಿಯಬೇಕು? ಮಾನ್ಯ ಮಂತ್ರಿಗಳೆ, ಶುದ್ಧವಾದ ನೀರನ್ನು ಕೊಡುವಂಥ ವ್ಯವಸ್ಥೆ ಮಾಡಿ.

ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ :– ಮಾನ್ಯ ಛೇರ್ಮನ್‌ರವರೆ, ಇವರು ಎಸ್ಟಿಮೇಟ್ ಮಾಡುತ್ತಾರೆ, ಮತ್ತೆ ಅದು ಅಪ್ರೂವಲ್ ಹೋಗುತ್ತವೆ, ಒಂದು ವರ್ಷಕ್ಕಿಂತ ಹೆಚ್ಚು ಕಾಲ ಪ್ರೊಸೆಸ್‌ಗೆ ಹಿಡಿಯುತ್ತದೆ. ಇದರಿಂದ ಬಹಳ ತೊಂದರೆಯಾಗುತ್ತದೆ. ಈ ಫ್ಲೋರೈಡ್ ನೀರಿನ ತೊಂದರೆ ಹುನಗುಂದ ತಾಲ್ಲೂಕಿನಲ್ಲಿದೆ, ನಮ್ಮ ತಾಲ್ಲೂಕಿನಲ್ಲಿಯೂ ಇದೆ, ನಮ್ಮ ಜಿಲ್ಲೆಯಲ್ಲಿಯೇ ಇದೊಂದು ಸುಣ್ಣದ ಕಲ್ಲಿನ ಫ್ಲೋರೈಡ್ ಸಮಸ್ಯೆ ಇರುವುದರಿಂದ ಈ ಕೆಲಸಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಆಗುವಂತೆ ನೋಡಿಕೊಳ್ಳಬೇಕು.

ಶ್ರೀ ಚಿಕ್ಕನಗೌಡ ದೊಡ್ಡನಗೌಡ ಈಶ್ವರಗೌಡ ಪಾಟೀಲ್ :– ಮಾನ್ಯ ಛೇರ್ಮನ್‌ರವರೆ, ನಮ್ಮ ಹುನಗುಂದ ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ಫ್ಲೋರೈಡ್ content ಹೆಚ್ಚು ಇರುವುದರಿಂದ ಹೆಚ್ಚು ಜನರ ಆರೋಗ್ಯಕ್ಕೆ ತೊಂದರೆಯಾಗಿದೆ. ಆದಕಾರಣ ಇವತ್ತು ಮಲ್ಟಿ ವಿಲೇಜ್ ಸ್ಕೀಂ ಅಡಿಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಎರಡು ಯೋಜನೆಗಳಿಗೆ ಈಗಾಗಲೇ ಸರ್ಕಾರ ಅನಿಮೋದನೆ ನೀಡಿದೆ. ಆದುದರಿಂದ ಆ ಸ್ಕೀಂ ಅನ್ನು ಜಾರಿಗೆ ತರಲು ಆದಷ್ಟು ಬೇಗ ಎಸ್ಟಿಮೇಟ್ ಮಾಡಿ ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಬೇಕೆಂದು ಗ್ರಾಮೀಣ ನೀರು ಸರಬರಾಜು ಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಸಚಿವರು) :– ಮಾನ್ಯ ಛೇರ್ಮನ್‌ರವರೆ, ಬಾಗಲಕೋಟೆ ಜಿಲ್ಲೆಯಲ್ಲಿ 623 ಗ್ರಾಮಗಳಲ್ಲಿ 135 ಹಳ್ಳಿಗಳಲ್ಲಿ ಮಾತ್ರ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶವಿರುವ ಬಗ್ಗೆ ನಮಗೆ ದೂರುಗಳು ಬಂದಿರುವ ಪ್ರಕಾರ ವಿಚಾರಣೆ ಮಾಡಿ ಅದಕ್ಕೆ ಬೇಕಾದಂಥ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಈ 135 ಗ್ರಾಮಗಳಲ್ಲಿ 9 ಯೋಜನೆಗಳನ್ನು ಇವತ್ತೇನು ಮಲ್ಟಿ ವಿಲೇಜ್ ಸ್ಕೀಂಗಳ ಬಗ್ಗೆ ಮಾಡಿರುವ ಯೋಜನೆಗೆ 53 ಕೋಟಿ ರೂಪಾಯಿ ಮಂಜೂರಾಗಿದೆ ಅದರ ಬಾಬ್ತಿ 9 ಗ್ರಾಮಗಳಲ್ಲಿ 9 ಯೋಜನೆಗಳಿಗೆ ಮಂಜೂರಾತಿ ಆಗಿದೆ. ಅದರ ಬಗ್ಗೆ ಟೆಂಡರ್ ಕರೆದು ಕಾರ್ಯಕ್ರಮವನ್ನು ಅತಿ ಶೀಘ್ರದಲ್ಲಿ ಮುಗಿಸುವಂಥದ್ದನ್ನು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಛೇರ್ಮನ್ :– ಗುರುಪಾದಪ್ಪ ನಾಗಮಾರಪಲ್ಲಿಯವರ ಪ್ರಶ್ನೆ ಇದೆ. ಆದರೆ ಈಗ ಅವರು ಸದನದಲ್ಲಿ ಹಾಜರಿಲ್ಲ. ಅವರ ಪ್ರಶ್ನೆಯನ್ನು ಬೇರೆಯವರು ಕೇಳುವುದಕ್ಕೂ ಅವರು ಪತ್ರವನ್ನು ಕೊಟ್ಟಿಲ್ಲವಾದ ಕಾರಣ ಮುಂದಿನ ಪ್ರಶ್ನೆ ತೆಗೆದುಕೊಳ್ಳುತ್ತಿದ್ದೇನೆ.